1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.

## ಕ್ರಿ ಮೊ ಸಂಖ್ಯೆ **950/2019**

ಪಿರ್ಯಾದಿ ಃ ರಾಜ್ಯದ ಪರವಾಗಿ ಲಕ್ಕವಳ್ಳಿ ಪೊಲೀಸರು

- ವಿರುದ್ಧ -

ಆರೋಪಿ/ತರುಃ **1.** ಶಂಕರಪ್ಪ.ಟಿ.ಜಿ. ಬಿನ್ ಗೊರವಯ್ಯ,
2. ಶೋಭ ಕೋಂ ಶಂಕರಪ್ಪ.ಟಿ.ಜಿ.,

ದಂ.ಪ್ರ.ಸಂ. ಕಲಂ **313** ರಡಿಯಲ್ಲಿ ಆರೋಪಿಯ ವಿಚಾರಣಾ ಹೇಳಿಕೆ

ಪ್ರಶ್ನೆ-1ಃ ಅಭಿಯೋಜನೆ ಪರ ಸಾಕ್ಷಿಗಳ ಹೇಳಿಕೆಯನ್ನು ಕೇಳಿಸಿಕೊಂಡಿದ್ದೀರಾ?
ಉತ್ತರ ಃ ಹೌದು

ಪ್ರಶ್ನೆ-2ಃ ಪ್ರಾಸಾ-1 ಪಿ.ಬಿ.ಧರ್ಮಪಾಲಾಕ್ಷ, ನಿವೃತ್ತ ಆಹಾರ ನಿರೀಕ್ಷಕರು ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 14.03.2017 ರಂದು ಸುಮಾರು 04.00 ಗಂಟೆ ಸಮಯದಲ್ಲಿ ತಹಶೀಲ್ದಾರ್ ರವರು ಕರೆ ಮಾಡಿ ಮಂಡರವಳ್ಳಿ ಗ್ರಾಮದ ಸರ್ವೆ ನಂ.42/3 ರಲ್ಲಿರುವ ತೋಟದ ಮನೆಯಲ್ಲಿ ಅಕ್ರಮವಾಗಿ ಅಕ್ಕಿ ಮತ್ತು ಬೆಳೆ ದಾಸ್ತಾನು ಮಾಡಿದ್ದಾರೆಂದು ಅವರಿಗೆ ಸಾರ್ವಜನಿಕರು ತಿಳಿಸಿರುತ್ತಾರೆಂದು ತನಗೆ ತಿಳಿಸಿರುತ್ತಾರೆ, ನಂತರ ತಹಶೀಲ್ದಾರ್ ರವರು ಸ್ಥಳ ಪರಿಶೀಲನೆ ಮಾಡಿ ವರದಿಯನ್ನು ನೀಡಿ ಎಂದು ತಿಳಿಸಿದರು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?
ಉತ್ತರ ಃ ಸುಳ್ಳು

ಪ್ರಶ್ನೆ-3 ಃ ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ತಾನು ಸ್ಥಳಕ್ಕೆ ಹೋದಾಗ ಹಲಸೂರು ಗೇಟ್ ಹತ್ತಿರ ಲಕ್ಕವಳ್ಳಿ ಪೊಲೀಸ್ ಠಾಣೆಯಿಂದ ಇಬ್ಬರು ಪೊಲೀಸರು ಅಲ್ಲಿಗೆ ಬಂದಿದ್ದು, ನಂತರ ತಾನು ಅವರ ಜೊತೆ ಮಂಡರವಳ್ಳಿ ಗ್ರಾಮದ ಸರ್ವೆ ನಂ.42/3 ರಲ್ಲಿರುವ ತೋಟದ ಮನೆಗೆ ಹೋದೆವು, ಅಲ್ಲಿ ಮನೆಯ ಬಾಗಿಲು ತೆಗೆದಿದ್ದು, ಮನೆಯಲ್ಲಿ ಯಾರೂ ಇರಲಿಲ್ಲ, ಆಗ ಅಲ್ಲಿದ್ದ ಸ್ಥಳೀಯರು ಶೋಭಾ ಕೋಂ ಟಿ ಜಿ ಶಂಕರಪ್ಪನವರಿಗೆ ಸೇರಿದ ಜಮೀನು ಎಂದು ತಿಳಿಸಿದರು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?
ಉತ್ತರ ಃಸುಳ್ಳು

ಪ್ರಶ್ನೆ-4 ಃ ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ತಾವು ಸ್ಥಳವನ್ನು ಪರಿಶೀಲಿಸಿದಾಗ ಸುಮಾರು ತಲಾ 25 ಕೆಜಿ ತೂಕದ 70 ಪ್ಲಾಸ್ಟಿಕ್

ಚೀಲದಲ್ಲಿ ಅಕ್ಕಿ ತುಂಬಿದ್ದು, ಮತ್ತು ಒಂದು ಗೋಣಿ ಚೀಲದಲ್ಲಿ 4 ಕೆಜಿಯ ತೊಗರಿಬೆಳೆ ಇದ್ದಿದ್ದು ಕಂಡುಬಂದಿರುತ್ತದೆ ನಂತರ ಅಕ್ಕಿಯನ್ನು ಪರಿಶೀಲಿಸಲಾಗಿ ಅದು ಸಾರ್ವಜನಿಕರಿಗೆ ವಿತರಿಸುವ ಪಡಿತರ ಅಕ್ಕಿ ಎಂದು ಮೇಲ್ನೊಟಕ್ಕೆ ಕಂಡುಬಂದಿದ್ದರಿಂದ ಮಹಜರು ಕ್ರಮವನ್ನು ಜರುಗಿಸಿ, ತದನಂತರ ಸದರಿ ಅಕ್ಕಿಯನ್ನು ಲಕ್ಕವಳ್ಳಿ ಪೊಲೀಸರ ವಶಕ್ಕೆ ನೀಡಿ, ಈ ಬಗ್ಗೆ ವಿಚಾರಣೆ ಕೈಗೊಳ್ಳುವಂತೆ ಕೋರಿಕೊಂಡೆನು, ನಂತರ ಅಲ್ಲಿ ಒಂದು ತೂಕದ ಯಂತ್ರ ಕಂಡುಬಂದಿದ್ದು, ಅದನ್ನು ಸಹ ಪೊಲೀಸರ ವಶಕ್ಕೆ ನೀಡಲಾಯಿತು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-5 ಃ ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಅಕ್ಕಿಯನ್ನು ಪರಿಶೀಲಿಸಲಾಗಿ ಅದು ಸಾರ್ವಜನಿಕರಿಗೆ ವಿತರಿಸುವ ಪಡಿತರ ಅಕ್ಕಿ ಎಂದು ಮೇಲ್ನೊಟಕ್ಕೆ ಕಂಡುಬಂದಿದ್ದರಿಂದ ಮಹಜರು ಕ್ರಮವನ್ನು ಜರುಗಿಸಿ, ತದನಂತರ ಸದರಿ ಅಕ್ಕಿಯನ್ನು ಲಕ್ಕವಳ್ಳಿ ಪೊಲೀಸರ ವಶಕ್ಕೆ ನೀಡಿ, ಈ ಬಗ್ಗೆ ವಿಚಾರಣೆ ಕೈಗೊಳ್ಳುವಂತೆ ಕೋರಿಕೊಂಡೆನು, ನಂತರ ಅಲ್ಲಿ ಒಂದು ತೂಕದ ಯಂತ್ರ ಕಂಡುಬಂದಿದ್ದು, ಅದನ್ನು ಸಹ ಪೊಲೀಸರ ವಶಕ್ಕೆ ನೀಡಲಾಯಿತು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-6 ಃ ಪ್ರಾಸಾ-6 ಶ್ರೀಮತಿ ಯಶೋಧ, ಮಹಿಳಾ ಪಿಸಿ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 13.04.2017 ರಂದು ತಾನು ಲಕ್ಕವಳ್ಳಿಯ ಪೊಲೀಸ್ ಠಾಣೆಯಲ್ಲಿದ್ದಾಗ 2 ನೇ ಆರೋಪಿಯಾದ ನೀವು ನಿರೀಕ್ಷಣಾ ಜಾಮೀನು ಪಡೆದು ಠಾಣೆಗೆ ಬಂದಿದ್ದು, ಆ ಸಮಯದಲ್ಲಿ ಮಂಡರವಳ್ಳಿ ಗ್ರಾಮದ ಸರ್ವೆ ನಂ.42/3 ರಲ್ಲಿ ತೋಟದ ಶೆಡ್ಡಿನಲ್ಲಿ ಅಕ್ರಮವಾಗಿ ಸಂಗ್ರಹಿಸಿದ ಅಕ್ಕಿ ಚೀಲವನ್ನು ಇಟ್ಟಿರುವ ಬಗ್ಗೆ ತಿಳಿಸಿದರು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-7 ಃ ಪ್ರಾಸಾ-6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಚಾಸಾ-12 ರವರು ತನ್ನನ್ನು ಹಾಗೂ ಇಬ್ಬರು ಪಂಚರುಗಳನ್ನು ಕರೆದುಕೊಂಡು ಇಲಾಖಾ ಜೀಪಿನಲ್ಲಿ ಮಂಡರವಳ್ಳಿ ಗ್ರಾಮದ ಸರ್ವೆ ನಂ.42/3 ಕ್ಕೆ ಹೋಗಿದ್ದು, ಆ ಸಂದರ್ಭದಲ್ಲಿ 2 ನೇ ಆರೋಪಿಯಾದ ನೀವು ತಮಗೆ 25 ಕೆಜಿಯ 70 ಖಾಲಿ ಗೋಣಿಚೀಲಗಳನ್ನು ತೋರಿಸಿದ್ದು, ಅದರ ಮೇಲೆ ಸ್ವಚ್ ಭಾರತ್ ಎಂಬ ಚಿಹ್ನೆ ಇತ್ತು, ಚೀಲದ ಮೇಲೆ ಮ್ಯಾನುಪ್ಯಾಕ್ಚರ್ ಬೈ ಇಂಡಿಯಾ ಎಂದು ನಮೂದು ಇತ್ತು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-8 ಃ ಪ್ರಾಸಾ-6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆ ಸಂದರ್ಭದಲ್ಲಿ ಚಾಸಾ-12 ರವರು ಮಧ್ಯಾಹ್ನ 02.45 ರಿಂದ 03.45 ರವರೆಗೆ ಮಹಜರು ಕ್ರಮವನ್ನು ಜರುಗಿಸಿ 70 ಖಾಲಿ ಗೋಣಿಚೀಲಗಳನ್ನು ಅಮಾನತ್ತು ಪಡಿಸಿಕೊಂಡರು,

ತಾನು ಛಾಯಚಿತ್ರವನ್ನು ತೆಗೆದಿರುತ್ತೇನೆ, 25 ಕೆಜಿ ಯ 70 ಗೋಣಿ ಚೀಲದ ಅಕ್ಕಿ, 4 ಕೆಜಿ ತೊಗರಿಬೇಳೆಯನ್ನು ಆರೋಪಿತರು ಅಕ್ರಮವಾಗಿ ಮಂಡರವಳ್ಳಿ ಗ್ರಾಮದ ಸರ್ವೆ ನಂ.42/3 ರಲ್ಲಿ ದಾಸ್ತಾನು ಮಾಡಿಕೊಂಡಿದ್ದು, ಈ ಬಗ್ಗೆ ಠಾಣಾ ಮೊಕದ್ದಮೆ ಸಂಖ್ಯೆ 24/2017 ರಲ್ಲಿ ಪ್ರಕರಣದ ದಾಖಲಾಗಿರುವ ಬಗ್ಗೆ ತನಗೆ ಮಾಹಿತಿ ಇರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-9 ಃ ಪ್ರಾಸಾ-7 ಜಿ.ಪಿ.ಮಂಜೇಗೌಡ, ನಿವೃತ್ತ ತಹಶೀಲ್ದಾರರು ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 19.04.2017 ರಂದು ಲಕ್ಕವಳ್ಳಿ ಪೊಲೀಸ್ ಉಪನಿರೀಕ್ಷಕರು ತಮ್ಮ ಕಛೇರಿಗೆ ಒಂದು ಪತ್ರವನ್ನು ನೀಡಿ ಲಕ್ಕವಳ್ಳಿ ಹೋಬಳಿ, ಮಂಡರವಳ್ಳಿ ಗ್ರಾಮದ ಸರ್ವೆ ನಂ.42/3 ರ ಜಮೀನಿನಲ್ಲಿರುವ ಮನೆಯಲ್ಲಿ ಅಕ್ರಮವಾಗಿ ದಾಸ್ತಾನು ಮಾಡಿದ್ದ ಅಕ್ಕಿ ಮತ್ತು ಬೇಳೆಯನ್ನು ವಶಪಡಿಸಿಕೊಂಡು ಅಗತ್ಯ ವಸ್ತುಗಳ ಕಾಯ್ದೆಯಡಿ ಪ್ರಕರಣ ದಾಖಲಿಸಿ ಈ ಪ್ರಕರಣದಲ್ಲಿ ವಶಪಡಿಸಿಕೊಂಡ ಅಕ್ಕಿ ಮತ್ತು ಬೇಳೆಯ ಶ್ಯಾಂಪಲ್ ನ್ನು ತಮ್ಮ ಕಛೇರಿಗೆ ಕಳುಹಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-10 ಃ ಪ್ರಾಸಾ-7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ಅಕ್ಕಿ ಬೇಳೆಯು ಸಾರ್ವಜನಿಕ ವಿತರಣೆಗೆ ಹಾಗೂ ಮಧ್ಯಾಹ್ನ ಉಪಹಾರ ಯೋಜನೆಯಡಿ ಸರ್ಕಾರದಿಂದ ಅಕ್ಕಿ ಮತ್ತು ಬೇಳೆಯೇ ಎಂದು ಪರಿಶೀಲಿಸಿ ವರದಿ ಸಲ್ಲಿಸಲು ಕೋರಿರುತ್ತಾರೆ, ಅದರಂತೆ ದಿನಾಂಕ 09.05.2017 ರಂದು ತಮ್ಮ ಕಛೇರಿಯ ಆಹಾರ ನಿರೀಕ್ಷಕರು, ತರೀಕೆರೆ ಎ.ಪಿ.ಎಂ.ಸಿ. ಯಾರ್ಡನಲ್ಲಿರುವ ಆಹಾರ ದಾಸ್ತಾನು ಮಳಿಗೆಗೆ ಭೇಟಿ ನೀಡಿ ಸರ್ಕಾರದಿಂದ ಸಾರ್ವಜನಿಕರಿಗೆ ವಿತರಣೆ ಹಾಗೂ ಮಧ್ಯಾಹ್ನ ಉಪಹಾರ ಯೋಜನಗೆ ವಿತರಿಸುವ ಅಕ್ಕಿ ಮತ್ತು ಬೇಳೆಯ ಸ್ಯಾಂಪಲ್ ನ್ನು ಪಂಚರ ಸಮಕ್ಷಮ ತೆಗೆದು ಸದರಿ ಸ್ಯಾಂಪಲ್ ನೊಂದಿಗೆ ಕಛೇರಿಗೆ ವರದಿ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-11 ಃ ಪ್ರಾಸಾ-7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ವರದಿಯಂತೆ ಪ್ರಕರಣದ ಆರೋಪಿತರಿಂದ ಸಂಗ್ರಹಿಸಲಾದ ಅಕ್ಕಿ ಮತ್ತು ಬೇಳೆಯ ಸ್ಯಾಂಪಲ್ ಹಾಗೂ ಆಹಾರ ದಾಸ್ತಾನು ಮಳಿಗೆಯಲ್ಲಿರುವ ಅಕ್ಕಿ ಬೇಳೆಯ ಮಾದರಿ ಒಂದೇ ಎಂಬುದಾಗಿ ವರದಿ ನೀಡಿರುತ್ತಾರೆ, ಸದರಿ ವರದಿಯನ್ನು ಮಹಜರಿನೊಂದಿಗೆ ಸೂಕ್ತ ಕ್ರಮಕ್ಕೆ ತಾನು ಪೊಲೀಸ್ ಉಪನಿರೀಕ್ಷಕರಿಗೆ ದಿನಾಂಕ 10.05.2017 ರಂದು ವರದಿ ಕಳುಹಿಸಿ ಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-12 ಃ ಪ್ರಾಸಾ-8 ಜಿ.ಎಸ್.ಬಾಬು, ಮುಖ್ಯಪೇದೆ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 14.03.2017 ರಂದು ತಾನು ಲಕ್ಕವಳ್ಳಿ ಪೊಲೀಸ್ ಠಾಣೆಯಲ್ಲಿ ಠಾಣಾ ಪ್ರಭಾರದಲ್ಲಿದ್ದಾಗ ತರೀಕೆರೆಯ ಆಹಾರ ನಿರೀಕ್ಷಕರಾದ ಚಾಸಾ-4 ರವರು 07.00

ಗಂಟೆಗೆ ಠಾಣೆಗೆ ಹಾಜರಾಗಿ ವರದಿ, ಮಹಜರು, ವಶಪಡಿಸಿಕೊಂಡಿರುವ ಮಾಲನ್ನು ತಂದು ನೀಡಿದ್ದನ್ನು ಸ್ವೀಕರಿಸಿ, ಠಾಣಾ ಮೊಕದ್ದಮೆ ಸಂಖ್ಯೆ 24/2017 ಇಸಿ ಆಕ್ಟ್ ಕಲಂ 3, 4, 7 ಮತ್ತು ಐಪಿಸಿ ಕಲಂ 417 ಅಡಿಯಲ್ಲಿ ಕೇಸನ್ನು ದಾಖಲಿಸಿ ಆರೋಪಿಯಾದ ನಿಮ್ಮ ವಿರುದ್ಧ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ನಿವೇದಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-13 ಃ ಪ್ರಾಸಾ-8 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅದೇ ದಿನ ಚಾಸಾ-1 ರವರ ಜೊತೆ ಮಂಡರವಳ್ಳಿ ಗ್ರಾಮದ ಸರ್ವೆ ನಂ.42/3 ರಲ್ಲಿ ಖಾತೆದಾರರಾದ 2 ನೇ ಆರೋಪಿಯಾದ ನಿಮ್ಮ ಜಮೀನಿನ ಮನೆಯಲ್ಲಿ ಪಂಚರಾದ ಚಾಸಾ-2 ಮತ್ತು 3 ರವರ ಸಮಕ್ಷಮ ಮನೆಯಲ್ಲಿ ಶೇಖರಣೆ ಮಾಡಿಟ್ಟಿರುವ 25 ಕೆಜಿ ವುಳ್ಳ 70 ಮೂಟೆ ಪ್ಲಾಸ್ಟಿಕ್ ಚೀಲದಲ್ಲಿ ಅಕ್ಕಿ, ಮತ್ತು ಗೋಣಿ ಚೀಲದಲ್ಲಿದ್ದ 4 ಕೆಜಿ ತೊಗರಿಬೇಳೆ, ತೂಕ ಮಾಡಲು ಒಂದು ಸ್ಕೇಲ್ ಸಹ ಇದ್ದು, ಇವುಗಳನ್ನು ಅಮಾನತ್ತು ಪಡಿಸಿಕೊಂಡು ರಾತ್ರಿ 08.00 ರಿಂದ 09.00 ಗಂಟೆಯವರೆಗೆ ಮಹಜರು ಕ್ರಮವನ್ನು ಜರುಗಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-14 ಃ ಪ್ರಾಸಾ-8 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಠಾಣೆಗೆ ಬಂದು ಅಮಾನತ್ತು ಪಡಿಸಿಕೊಂಡ ಮಾಲನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 14/17 ರಲ್ಲಿ ನಮೂದು ಮಾಡಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ, ನಂತರ ಮುಂದಿನ ತನಿಖೆಗಾಗಿ ಚಾಸಾ-12 ರವರಿಗೆ ಕಡತವನ್ನು ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-15 ಃ ಪ್ರಾಸಾ-9 ಚಂದ್ರುಶೇಖರ್.ಸಿ.ಎಲ್. ಪಿಐ ಕರ್ನಾಟಕ ಲೋಕಾಯುಕ್ತ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 04.08.2017 ರಂದು ಸದರಿ ಪ್ರಕರಣದ ಕಡತವನ್ನು ಚಾಸಾ-12 ರವರಿಂದ ಪಡೆದುಕೊಂಡು ಪರಿಶೀಲಿಸಲಾಗಿ ಕಡತದಲ್ಲಿ ಚಾಸಾ-12 ರವರು ಕೆ ಎಫ್ ಎಸ್ ಸಿ ಚಿಕ್ಕಮಗಳೂರುರವರಿಗೆ ಚೀಲದ ಮೇಲಿರುವ ಟ್ರೇಡ್ ಮಾರ್ಕ್ ಬಗ್ಗೆ ಪತ್ರ ವ್ಯವಹಾರ ಮಾಡಿ ವರದಿ ಪಡೆದಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-16 ಃ ಪ್ರಾಸಾ-9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ವಶಕ್ಕೆ ಪಡೆದ ಅಕ್ಕಿ ಹಾಗೂ ತೊಗರಿಬೇಳೆಯ ಮೌಲ್ಯ ನಿರ್ಧರಿಸಲು ಕೋರಿ ತಹಶೀಲ್ದಾರ್ ತರೀಕೆರೆರವರಿಗೆ ಪತ್ರ ವ್ಯವಹಾರ ಮಾಡಿ ಮೌಲ್ಯದ ವರದಿಯನ್ನು ಪಡೆದಿರುತ್ತಾರೆ, ತಹಶೀಲ್ದಾರ್ ತರೀಕೆರೆಯವರು ಸದರಿ ಅಕ್ಕಿ ಹಾಗೂ ತೊಗರಿಬೇಳೆ ಪಡಿತರ ಅಕ್ಕಿ

ಎಂದು ವರದಿ ನೀಡಿರುವುದು ಕಂಡುಬಂದಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-17 ಃ ಪ್ರಾಸಾ-9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ತನಿಖೆಯನ್ನು ಮುಂದುವರಿಸಿ, ದಿನಾಂಕ 09.08.2017 ರಂದು ಮಾನ್ಯ ಜಿಲ್ಲಾಧಿಕಾರಿ, ಚಿಕ್ಕಮಗಳೂರುರವರ ಆದೇಶದಂತೆ ವಶಕ್ಕೆ ಪಡೆದ ಅಕ್ಕಿ ಮತ್ತು ತೊಗರಿಬೇಳೆಯನ್ನು ಆಹಾರ ನಿರೀಕ್ಷಕರು ತರೀಕೆರೆಯವರ ವಶಕ್ಕೆ ನೀಡಿರುತ್ತೇನೆ, ದಿನಾಂಕ 11.08.2017 ರಂದು 1 ನೇ ಆರೋಪಿಯಾದ ನಿಮಗೆ ಸಿಆರ್.ಪಿ.ಸಿ. ಕಲಂ 41 ಅಡಿಯಲ್ಲಿ ನೋಟೀಸನ್ನು ಜಾರಿ ಮಾಡಿರುತ್ತೇನೆ, ಆದರೂ ಸಹ ತನಿಖೆಗಾಗಿ ಹಾಜರಾಗದ ಕಾರಣ ಆರೋಪಿಯ ಪತ್ತೆಗೆ ಪ್ರಯತ್ನಿಸಿದ್ದು ಸಿಕ್ಕಿರುವುದಿಲ್ಲ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-18 ಃ ಪ್ರಾಸಾ-9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 14.02.2018 ರಂದು ತಹಶೀಲ್ದಾರ್ ಕಛೇರಿ ತರೀಕೆರೆಯಲ್ಲಿ ಕೃತ್ಯ ನಡೆದ ಸ್ಥಳದ ಆರ್.ಟಿ.ಸಿ. ಯನ್ನು ಪಡೆದು ಕೊಂಡಿರುತ್ತೇನೆ, ನಂತರ ದಿನಾಂಕ 14.02.2018 ರಂದು ಸದರಿ ಆರೋಪಿತರಾದ ನಿಮ್ಮ ಮೇಲೆ ಆರೋಪ ಸಾಬೀತಾದ ಕಾರಣ ಆರೋಪಿತರಾದ ನಿಮ್ಮ ವಿರುದ್ಧ ಐಪಿಸಿ ಕಲಂ 417, 420 ಸಹವಾಚಕ ಕಲಂ 34 ಹಾಗೂ ಇ.ಸಿ.ಆಕ್ಟ್ ಕಲಂ 3, 4 ಮತ್ತು 7 ಅಡಿಯಲ್ಲಿ ದೋಷಾರೋಪಣಾ ಪಟ್ಟಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ನಿವೇದಿಸಿ ಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-19 ಃ ಈ ಕೇಸಿನ ಬಗ್ಗೆ ನೀವು ಏನಾದರೂ ಹೇಳುವುದಿದೆಯಾ?

ಉತ್ತರ ಃ ಇಲ್ಲ

ಪ್ರಶ್ನೆ-20 ಃ ನಿಮ್ಮ ಪರವಾಗಿ ಯಾರಾದರೂ ಸಾಕ್ಷಿಗಳಿದ್ದಾರಾ ಮತ್ತು ಯಾವುದಾದರೂ ದಾಖಲೆಗಳಿವೆಯಾ?

ಉತ್ತರ ಃ ಇಲ್ಲ

(ಈ ಹೇಳಿಕೆಯನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ, ಕೇಳಿದ ನಂತರ ಆರೋಪಿ ಕೊಟ್ಟ ಉತ್ತರವನ್ನು ನಾನೇ ಯಥಾವತ್ತಾಗಿ ಬರೆದುಕೊಂಡಿರುವುದು ನಿಜ ಮತ್ತು ಸತ್ಯವಾಗಿದೆಯೆಂದು ದೃಢೀಕರಿಸುತ್ತೇನೆ.)

ದಿನಾಂಕ ಃ 18.08.2026

ಸಹಿ

**(**ಊರ್ಮಿಳ**.**ವಿ**)**

**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಪ್ರ**.**ದ**.**ನ್ಯಾ**.**ದಂ**.,** ತರೀಕೆರೆ**.**